ಹೋಗ್ಲಿ, ನಿಮ್ಮ ಟಿಕೆಟ್ ಕೊಡಿ ನೋಡೋಣ.'

'ಟಿಕೆಟ್ ಮಗನ ಹತ್ತಿರ ಇದೆ. ನನಗಿದು ಮೊದಲ ಅನುಭವ.'

ಬ್ರಿಟಿಶ್ ಏರ್‌ವೇಸ್‌ನ ಕೌಂಟರ್‌ನಲ್ಲಿದ್ದ ಕಂಪ್ಯೂಟರ್ ಹನ್ನೆರಡೂವರೆ ಗಂಟೆಯ ಲಂಡನ್ ಫ್ಲೈಟ್‌ನ ಪ್ರಯಾಣಿಕರ ಯಾದಿಯಲ್ಲಿ ನಾಲ್ಕು ಹೆಸರುಗಳನ್ನು ತೋರಿಸಿತು: ಸತೀಶ, ಅಲಕಾ, ತೇಜ್ ಮತ್ತು ಸರಯೂ!

ಮುಂದೇನು ಎಂದು ಹೊಳೆಯದೆ, ಶ್ರೀಕಂಠಯ್ಯ ಮಂಕಾಗಿ ವೇಟಿಂಗ್ ರೂಮಿನ ಆಸನವೊಂದರಲ್ಲಿ ಕುಕ್ಕರಿಸಿದರು. ನಡುರಾತ್ರಿಯಲ್ಲಿ ಹೋಗುವುದಾದರೂ ಎಲ್ಲಿಗೆ? ಶ್ರೀನಿವಾಸ ರಾಯರ ಮನೆಗೆ ಹೋಗಲಾ? ಛೇ! ಮಂಡ್ಯದಲ್ಲಿರುವ ಲಕ್ಷ್ಮಿಯ ತಂಗಿ–ನನ್ನ ನಾದಿನಿಯ ಮನೆಗೆ ಹೋಗಲಾ? ಮೊನ್ನೆ ತಾನೇ ಎಲ್ಲರೂ ಮನೆಗೆ ಬಂದು ಬೀಳ್ಕೊಟ್ಟು ಹೋಗಿದ್ದಾರೆ. ಅವರಿಗೆ ಹೇಗೆ ಮುಖ ತೋರಿಸಲಿ? ಎಲ್ಲಿಗೆ ಹೋಗವುದಾದರೂ ಬೆಳಗಾಗಬೇಕು. ಈ ಕ್ಷಣದಲ್ಲಿ, ಈ ಅಪರಿಚಿತ ಸ್ಥಳದಲ್ಲಿ ನನ್ನ ಮುಂದಿನ ಹೆಜ್ಜೆ ಏನು? ನನ್ನ ಮಗ–ನಾನೇ ಕೈತುತ್ತು ನೀಡಿ ಬೆಳೆಸಿದ ಮಗ ಹೀಗೆ ಮಾಡಬಹುದೇ?! ಮಗ, ಸೊಸೆ ಇಬ್ಬರೂ ಸೇರಿ ನನ್ನನ್ನೇ ಯಾಮಾರಿಸಿಬಿಟ್ಟರಲ್ಲ! ದುರುಳರು!

ಒಂದು ಬಗೆಯ ಮಂಪರಿನ ಸ್ಥಿತಿಯಲ್ಲಿ ಮುಳುಗಿ ಹೋಗಿದ್ದ ಶ್ರೀಕಂಠಯ್ಯ ಕೈಯಲ್ಲಿದ್ದ ಪುಟ್ಟ ಬ್ಯಾಗ್‌ನೊಂದಿಗೆ ಏರ್‌ಪೋರ್ಟ್‌ನ ಎಕ್ಸಿಟ್‌ಗೆ ಬಂದರು. ನಿಯಂತ್ರಣ ತಪ್ಪುತ್ತಿರುವ ಹೆಜ್ಜೆಗಳು. ನಿಧಾನವಾಗಿ ಹೆಜ್ಜೆ ಇಡುತ್ತ ಬಸ್‌ಸ್ಟಾಪ್‌ಗೆ ಬಂದು ಬಸ್‌ಗಾಗಿ ಕಾಯುತ್ತ ನಿಂತರು.

## ಮೋಹನ ಹಬ್ಬು

ನಿವೃತ್ತ ಅಧ್ಯಾಪಕರಾಗಿರುವ ಮೋಹನ ಹಬ್ಬು, ಎರಡು ದಶಕಗಳಲ್ಲಿ ಕತೆ, ಕವಿತೆ, ನಾಟಕ, ವಿಮರ್ಶೆ, ಅನುವಾದ, ಸಂಪಾದನೆ ಸೇರಿದಂತೆ ಇಪ್ಪತ್ತೈದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಹಲವು ಸಂಘ–ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರಿಗೆ 'ಪ್ರಜಾವಾಣಿ' ಕಥಾಸ್ಪರ್ಧೆಯ ಬಹುಮಾನ ಸಂದಿದೆ. ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯಲ್ಲಿ ನೆಲೆಸಿದ್ದಾರೆ.